# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ವಿಆ(ಘ.ತ್ಯಾ.ನಿ)/ಪಿಆರ್/75/2016-17

ವಿಶೇಷ ಆಯುಕ್ತರು (ಘ.ತ್ಯಾ.ನಿ/ಆ)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:20.06.2016.

**:: ಕಛೇರಿ ಆದೇಶ ::**

ವಿಷಯ: ಫ್ರೀಡಂ ಪಾರ್ಕ್ ನಲ್ಲಿರುವ Briquetting ಘಟಕಕ್ಕೆ ತೆಂಗಿನ ಚಿಪ್ಪುಗಳನ್ನು ಸಾಗಾಣಿಕೆ ಮಾಡಲು ವಲಯವಾರು ಹಂಚಿಕೆ ಮಾಡಿರುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ ತೆಂಗಿನ ಚಿಪ್ಪುಗಳು ಉತ್ಪತ್ತಿಯಾಗುತ್ತಿದ್ದು, ಪರಿವೀಕ್ಷಣೆ ಸಮಯದಲ್ಲಿ ರಸ್ತೆಗಳಲ್ಲಿ, ಪಾದಾಚರಿ ಮಾರ್ಗಗಳಲ್ಲಿ ಬಿದ್ದಿರುವುದು ಕಂಡು ಬಂದಿರುತ್ತದೆ ಹಾಗೂ ಘನತ್ಯಾಜ್ಯ ವಸ್ತುಗಳ ಜೊತೆ ಮಿಶ್ರಣಗೊಂಡು ತ್ಯಾಜ್ಯ ವಿಲೇವಾರಿ ಘಟಕಕ್ಕೆ ವಿಲೇವಾರಿ ಮಾಡುತ್ತಿರುವುದನ್ನು ಸಹ ಗಮನಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ತೆಂಗಿನ ಚಿಪ್ಪುಗಳನ್ನು ವ್ಯವಸ್ಥಿತ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗಿರುವ ನಿಟ್ಟಿನಲ್ಲಿ ಫ್ರೀಡಂ ಪಾರ್ಕ್‌ನಲ್ಲಿ Briquetting ಘಟಕವನ್ನು ಈಗಾಗಲೇ ಸ್ಥಾಪಿಸಲಾಗಿರುತ್ತದೆ. ಸದರಿ ಘಟಕದಲ್ಲಿ ತೆಂಗಿನ ಚಿಪ್ಪುಗಳನ್ನು ಮಾತ್ರ ಸಂಗ್ರಹಣೆ ಮಾಡಲಾಗುವುದು.

ಫ್ರೀಡಂ ಪಾರ್ಕ್ ನಲ್ಲಿರುವ Briquetting ಘಟಕಕ್ಕೆ ತೆಂಗಿನ ಚಿಪ್ಪುಗಳನ್ನು ಸಾಗಾಣಿಕೆ ಮಾಡಲು ವಲಯವಾರು ಈ ಕೆಳಗಿನಂತೆ ಹಂಚಿಕೆ ಮಾಡಲಾಗಿದ್ದು, ಎಲ್ಲಾ ವಲಯದವರು ಹಂಚಿಕೆ ಮಾಡಿರುವಂತೆ ಪ್ರತಿ ನಿತ್ಯ ತೆಂಗಿನ ಚಿಪ್ಪುಗಳನ್ನು ಘನತ್ಯಾಜ್ಯ ವಸ್ತುಗಳ ಜೊತೆ ಮಿಶ್ರಣ ಮಾಡದೇ ಪ್ರತ್ಯೇಕವಾಗಿ ಮೇಲೆ ತಿಳಿಸಿರುವ ಘಟಕಕ್ಕೆ ಸಾಗಾಹಣೆ ಮಾಡಲು ಸೂಚಿಸಿದೆ.

## Freedom Park - Briquetting Plant Allocation

| Sl No | Zone | Allocation (in tons) |
|---|---|---|
| 1 | East | 6 |
| 2 | West | 13 |
| 3 | South | 6 |
| **Total** | | **25** |

20.6.16

ವಿಶೇಷ ಆಯುಕ್ತರು (ಘ.ತ್ಯಾ.ನಿ.)
ಬಿಬಿಎಂಪಿ

<u>ಪ್ರತಿಯನ್ನು:</u>

1) ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2) ಉಪ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3) ಮಾನ್ಯ ಆಯುಕ್ತರು, ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4) ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ ರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5) ಪ್ರಧಾನ ಅಭಿಯಂತರರು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7) ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
8) ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
9) ಎಲ್ಲಾ ವಲಯ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
10) ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸುತ್ತಾ, ಮೇಲೆ ಸೂಚಿಸಿರುವಂತೆ ಅಗತ್ಯ ಕ್ರಮವಹಿಸುವುದು.
11) ಕಛೇರಿ ಕಡತಕ್ಕೆ.